# ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.

**CC No.580/2022**

**PW-6 CW-6**

| | | |
|---|---|---|
| ಸಾಕ್ಷಿದಾರನ ಹೆಸರು | : | ರಂಗನಾಥ ತಂದೆ ಶಿವಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗ್ರಾಮ ಸಹಾಯಕ |
| ವಾಸಸ್ಥಳ | : | ಕಮಲದಿನ್ನಿ |
| ಪ್ರಮಾಣೀಕರಿಸಿದ ದಿನಾಂಕ | : | 15-11-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ದಿನಾಂಕ 22-06-2022 ರಂದು ಬೆಳಿಗ್ಗೆ 9-00 ರಿಂದ 10-00 ಗಂಟೆಯ ಸಮಯದಲ್ಲಿ ನಾಗಲಾಪೂರ ಗ್ರಾಮದ ದುರ್ಗಾದೇವಿ ದೇವಸ್ಥಾನದ ಬಳಿ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ, ನಾನು ಹಾಗೂ ಗ್ರಾಮಸ್ಥರು ಹೋಗಿದ್ದೆವು. ಸದರಿ ನ್ಯಾಯಾಲಯದ ಮುಂದಿರುವ ಆರೋಪಿತರು ಸರಕಾರಿ ಜಮೀನನ್ನು ಒತ್ತುವರಿ ಮಾಡಿದ್ದರಿಂದ ನಾವು ಹೋಗಿರುತ್ತೇವೆ. ಇಷ್ಟನ್ನು ಹೊರತುಪಡಿಸಿ ಬೇರೆ ಏನು ಗೊತ್ತಿರುವುದಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.**

ಆರೋಪಿತರು ಸರಕಾರಿ ಜಮೀನು ಅತಿಕ್ರಮಣ ಮಾಡಿ ಸಾಗುವಳಿ ಮಾಡಿರುತ್ತಾರೆ. ಅವರ ಜಮೀನನ್ನು ತೆರವುಗೊಳಿಸಲು ತಹಸೀಲ್ದಾರ ಮತ್ತು ಆರ್ಐ ರವರು 25-06-2022 ರಿಂದ 01-07-2022 ರ ವರೆಗೆ ಕಾಲಾವಕಾಶ ಕೊಟ್ಟರೂ ಆರೋಪಿತರು ಜಮೀನು ತೆರವುಗೊಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಿಪಿ-5 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ನನ್ನ ವ್ಯಾಪ್ತಿಯಲ್ಲಿ 10 ಗ್ರಾಮಗಳು ಬರುತ್ತವೆ. ನನ್ನ ವ್ಯಾಪ್ತಿಯಲ್ಲಿರುವ 10 ಹಳ್ಳಿಗಳಿಗೆ ಒಬ್ಬರೇ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರು ಇರುತ್ತಾರೆ. ನನ್ನ ಸ್ವಂತ ಊರು ಕಮಲದಿನ್ನಿ ಎಂದರೆ ಸರಿ. ಬೇವೂರ ಗ್ರಾಮದ ಸಂಪೂರ್ಣ ವಿಳಾಸ ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ

ಮುಂದಿರುವ ಆರೋಪಿತರ ಹೆಸರು, ತಂದೆಯ ಹೆಸರು, ನಿಖರವಾದ ವಿಳಾಸ ಹೇಳಲು ಬರುವುದಿಲ್ಲ. ನಾಗಲಾಪೂರ ಗ್ರಾಮದಲ್ಲಿ ಸಾಗುವಳಿ ಜಮೀನು ಇರುವುದಿಲ್ಲ ಗುಡ್ಡಗಾಡು ಇರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.